ಓ ಎಸ್ ನಂ.**302/2016**

ಪಿ ಡಬ್ಲ್ಯೂ-**1**

**ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲು :- ಶ್ರೀ. ಬಿ ವಿ ವಿ ವಕೀಲರಿಂದ

ಹರಿಜನ ಕಾಲೋನಿಗೆ ಸೇರಿದ ಸರ್ವೆ ನಂ.57/2 ರ ಸ್ವತ್ತನ್ನು ಒತ್ತುವರಿ ಮಾಡಿದ್ದೇನೆಂದರೆ ಸರಿಯಲ್ಲ. ಎಂದರೆ ಸರಿಯಲ್ಲ. ನನ್ನ ಪೂರ್ವಜರು 1926 ರಲ್ಲಿ ಕ್ರಯಕ್ಕೆ ಪಡೆದಿರುವ ಸ್ವತ್ತಿನ ವಿಸ್ತೀರ್ಣಕ್ಕಿಂತಲೂ ಹೆಚ್ಚಿನ ವಿಸ್ತೀರ್ಣಕ್ಕೆ ಮನೆ ಕಟ್ಟಿಕೊಂಡಿದ್ದೇನೆಂದರೆ ಸರಿಯಲ್ಲ. ತಹಶೀಲ್ದಾರ್ ರವರು ನಾನು ಸರ್ವೆ ನಂ.57/2 ರ ಸ್ವತ್ತನ್ನು ಒತ್ತುವರಿಮಾಡಿದ್ದೇನೆಂದು ವರದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಮತ್ತು ಪ್ರತಿವಾದಿಗಳ ಸರ್ವೆ ನಂ. 57/2 ರ ಸ್ವತ್ತನ್ನು ಅಳತೆಮಾಡಲು ನಿಮ್ಮ ತಕರಾರು ಇದೆಯೇ ಎಂದರೆ ಸಾಕ್ಷಿಯು ಅವರ ಸ್ವತ್ತನ್ನು ಅಳತೆ ಮಾಡಿಕೊಳ್ಳಲಿ ಆದರೆ ನನ್ನ ಸ್ವತ್ತನ್ನು ಅಳತೆಮಾಡಲು ತಕರಾರು ಇದೆ ಎಂದು ಹೇಳುತ್ತಾರೆ . ಅಳತೆಮಾಡಿದರೆ ವಾಸ್ತಾವಾಂಶ ತಿಳಿಯುತ್ತದೆಂದು ಅಳತೆಮಾಡಲು ನನ್ನ ತಕರಾರು ಇದೆ ಎಂದು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸರ್ವೆ ನಂ. 57 ರಲ್ಲಿ ಒಟ್ಟು 24 ಗುಂಟೆ ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ 24 ಗುಂಟೆ ಮೊದಲು ಕೇಶವ ದೇವರ ದೇವಸ್ಥಾನ ಪೂಜೆ ಮಾಡುವ ಅರ್ಚಕರಾದ ಶ್ರೀನಿವಾಸ ಅಯ್ಯಂಗಾರ್ ರವರಿಗೆ ನೀಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಶ್ರೀನಿವಾಸ ಅಯ್ಯಂಗಾರ್ ರವರಿಂದ ತಮ್ಮ ಆದೇಶ ಸಂಖ್ಯೆ ಡಿ ಇ ಪಿ /ಎಲ್ ಕ್ಯೂ 4/1962-63 ರಂತೆ ತಹಶೀಲ್ದಾರ್ ರವರು 14 ಗುಂಟೆಯನ್ನು ಭೂ ಸ್ವಾಧೀನಪಡಿಸಿಕೊಂಡು ದುರಸ್ಥಿ ಮತ್ತು ಪಕ್ಕಾಪೋಡ್ ಮಾಡಿ ಸರ್ವೆ ನಂ. 57/2 ಎಂದು ನಮೂದಿಸಿ ಸದರಿ ಸ್ವತ್ತನ್ನು ಹರಿಜನರ ಕಾಲೋನಿಯ ಸಮೂದಾಯಭವನಕ್ಕೆ ನೀಡಿದ್ದಾರೆ ಎಂದರೆ ಸರಿಯಲ್ಲ.

ನಾನು ನನ್ನ ಲಿಖಿತ ಹೇಳಿಕೆಯ ಪ್ಯಾರಾ 9 ರಲ್ಲಿ ಹೇಳಿರುವ ಪುರಸಭಾ ವ್ಯಾಪ್ತಿಯಹಳೇ ಎ ಅರ್ ನಂ.112 /1 ಖಾತಾ ನಂ.99/1, ಹಾಗೂ ಎಸ್ ಎ ಎಸ್ ನಂ. 138/1 ರಲ್ಲಿ ಪೂಪ-61 ಅಡಿ , ಉಃದ-31 ಅಡಿ ಸರ್ವೆ ನಂ.57/2 ರಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಪುರಸಭಾ ಅಧಿಕಾರಿಗಳು

ಷರೀಖುಮಾಡಿಕೊಂಡು ಪ್ರತಿವಾದಿಗಳ ಸ್ವತ್ತನ್ನು ಖಾತೆ ಮಾಡಿಸಿಕೊಂಡಿದ್ದೇನೆಂದರೆ ಸರಿಯಲ್ಲ. ನ್ಯಾಯಾಲದಿಂದ ಆದ ಮಧ್ಯಂತರ ಆದೇಶವನ್ನು ದುರುಪಯೋಗಪಡಿಸಿಕೊಂಡು ಒತ್ತುವರಿಮಾಡಿಕೊಂಡು ಪ್ರತಿವಾದಿಗಳ ಸ್ವತ್ತಿನಲ್ಲಿ ಅಕ್ರಮವಾಗಿ ಕಟ್ಟಡ ಕಟ್ಟಿರುತ್ತೇನೆಂದರೆ ಸರಿಯಲ್ಲ . ದಾವಾ ಸ್ವತ್ತು ಬಿ ಎಂ ರಸ್ತೆಯಿಂದ ಸುಮಾರು 120 ಅಡಿ ಅಂತರದಲ್ಲಿದೆ . ಬೆಲೆಬಾಳುವ ಪ್ರತಿವಾದಿಗಳ ಸ್ವತ್ತನ್ನು ದಕ್ಕುಹಾಕಿಕೊಳ್ಳುವ ಸಲುವಾಗಿ ಸುಳ್ಳು ದಾವಾ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

(ಎಸ್.ಚಿನ್ನಸ್ವಾಮಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.